# ಸಾವಿರ ಕಂಬಗಳಾಗೋಣ

ಭಾರತ ಮಾತೆಯ ಮಂದಿರಕೆ
ಸಾವಿರ ಕಂಬಗಳಾಗೋಣ.
ಭರತ ಭೂಮಿಯ ರಕ್ಷಣೆಗೆ
ಕೋಟಿ ಸೈನಿಕರಾಗೋಣ.
ವಿಶ್ವ ಜೀವನವೆ ನಮ್ಮ ಜೀವನವು
ವಿಶಾಲ ಹೃದಯಿಗಳಾಗೋಣ.
ಎಲ್ಲ ದೇಶಕು ಎಲ್ಲ ಕಾಲಕು
ಸಾಧನೆ ಸಫಲತೆ ಹಂಚೋಣ.
ಸ್ವಾಭಿಮಾನದ ಸಾರ್ಥಕ ಬದುಕಿನ
ಮಾನವತೆಯನು ಮೆರೆಯೋಣ.
ಒಂದೇ ಮನದ ಒಂದೇ ಧ್ವನಿಯ
ರಾಷ್ಟ್ರವ ಕಟ್ಟುತ ನಲಿಯೋಣ
ಬಗೆಬಗೆ ಬಣ್ಣದ ಹೂದಳದಂತೆ
ವೈವಿಧ್ಯವನು ಬೆಳೆಸೋಣ.
ಸಮತೆಯ ದೀಪ ಬೆಳಗೋಣ
ಪ್ರೀತಿ–ಮಮತೆಗಳ ಬಿತ್ತೋಣ.
ದ್ವೇಷ–ಅಸೂಯೆ ತೊರೆಯೋಣ
ಬಲಿಷ್ಠ ಭಾರತ ಕಟ್ಟೋಣ.

ಆನೇಕಲ್ ಕೃಷ್ಣಮೂರ್ತಿ ಕಾಟಿ



Scanned with CamScanner

**ಅರ್ಥ ತಿಳಿಯಿರಿ:** ರಕ್ಷಣೆ–ಕಾಪಾಡುವಿಕೆ, ಸಂರಕ್ಷಿಸುವಿಕೆ; ಸೈನಿಕ–ಯೋಧ, ಭಟ; ಸಾರ್ಥಕ–ಸಫಲವಾದುದು, ಪ್ರಯೋಜನಕಾರಿ; ವೈವಿಧ್ಯ–ವಿವಿಧತೆ, ನಾನಾಪ್ರಕಾರ; ಸಮತೆ–ಸಾದೃಶ್ಯ, ಸಮಾನತೆ; ಮಮತೆ–ಮಮಕಾರ, ಪ್ರೀತಿ; ಬಿತ್ತೋಣ–ಬೀಜ ಹಾಕೋಣ, ಹರಡೋಣ; ತೊರೆ–ಬಿಡು, ತ್ಯಜಿಸು; ಬಲಿಷ್ಠ–ಬಲಶಾಲಿ, ಶಕ್ತಿವಂತ.

Scanned with CamScanner




**ಖಾಲಿ ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.**

(ರಕ್ಷಣೆಗೆ, ಬಲಿಷ್ಠ, ಸಮತೆಯ, ಮಾನವತೆಯನು, ಸಾವಿರ)

೧. ಭಾರತ ಮಾತೆಯ ಮಂದಿರಕೆ ......ಸಾವಿರ...... ಕಂಬಗಳಾಗೋಣ.

೨. ಭರತ ಭೂಮಿಯ ......ರಕ್ಷಣೆಗೆ...... ಕೋಟಿ ಸೈನಿಕರಾಗೋಣ.

೩. ಸ್ವಾಭಿಮಾನದ ಸಾರ್ಥಕ ಬದುಕಿನ ..ಮಹಾನ್ಮಂತ್ರವನು.... ಮೆರೆಯೋಣ.

೪. ದ್ವೇಷ–ಅಸೂಯೆ ತೊರೆಯೋಣ ....ಐಕ್ಯ........ ಭಾರತ ಕಟ್ಟೋಣ.

**ಆ) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

ವಿಶ್ವ ಜೀವನವೆ .....ನಮ್ಮ ........ಜೀವನವು..........

...........ವಿಶಾಲ..............................ಹೃದಯಿಗಳಾಗೋಣ.

ಎಲ್ಲ ದೇಶಕು ..........ಎಲ್ಲ ......ಕಾಲಕು..................

.........ಸಾಧನೆ ..........ಸಫಲತೆ.................. ಹಂಚೋಣ.

**ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಾವು ಯಾವಾಗ ವಿಶಾಲ ಹೃದಯಿಗಳಾಗುತ್ತೇವೆ?

ಉ: ವಿಶ್ವ ಜೀವನವೇ ನಮ್ಮ ಜೀವನವಾದಾಗ ನಾವು ವಿಶಾಲ ಹೃದಯಿಗಳಾಗುತ್ತೇವೆ

೨. ಎಲ್ಲ ದೇಶಕು, ಎಲ್ಲ ಕಾಲಕು ಏನನ್ನು ಹಂಚಬೇಕು?

ಉ: ಎಲ್ಲ ದೇಶಕು, ಎಲ್ಲ ಕಾಲಕು ಸಾಧನೆ ಸಫಲತೆ ಹಂಚಬೇಕು.

೩. ನಾವು ಯಾವ ಬಗೆಯ ರಾಷ್ಟ್ರವನ್ನು ಕಟ್ಟಬೇಕು?

ಉ: ನಾವು ಒಂದೇ ಮನದ ಒಂದೇ ಧ್ವನಿಯ ರಾಷ್ಟ್ರವನ್ನು ಕಟ್ಟಬೇಕು.

೪. ವೈವಿಧ್ಯವನ್ನು ಯಾವ ರೀತಿ ಬೆಳೆಸಬೇಕು?

ಉ: ಬಗೆಬಗೆ ಬಣ್ಣದ ಹೂದಳದಂತೆ ವೈವಿಧ್ಯವನ್ನು ಬೆಳೆಸಬೇಕು.

೫. ನಾವು ಏನನ್ನು ಬೆಳಗಬೇಕು?

ಉ: ನಾವು ಸಮತೆಯ ದೀಪ ಬೆಳಗಬೇಕು.

Scanned with CamScanner

ಅ) ಮಾದರಿಯಂತೆ ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

ಮಾದರಿ: ಕಂಬಗಳಾಗೋಣ – ಸೈನಿಕರಾಗೋಣ

ಹಂಚ್ಕೋಣ – ಮೆರೆಯೋಣ

ಕಟ್ಟೋಣ – ಬಿತ್ತೋಣ

ಬೆಳಗೋಣ – ತೂರೆಯೋಣ

ಆ) ಮೊದಲೆರಡು ಪದಗಳಿಗೆ ಸಂಬಂಧ ಕಲ್ಪಿಸಲಾಗಿದೆ. ಅಂತೆಯೆ ಮೂರನೆಯ ಪದಕ್ಕೆ ಹೊಂದುವ ಪದ ಬರೆಯಿರಿ.

೧. ಭಾರತ : ದೇಶ ; ಕರ್ನಾಟಕ : ರಾಜ್ಯ

೨ ದೇಶದ ರಕ್ಷಕ : ಸೈನಿಕ ; ಕಾವ್ಯ ರಚಿಸುವವ : ಕವಿ

೩. ಸ್ವಾಭಿಮಾನ : ನಾಲ್ಕು ಅಕ್ಷರದ ಪದ ; ಸಮತೆ : ಮೂರು ಅಕ್ಷರದ ಪದ

Scanned with CamScanner

ಇ) ಸ್ವಂತ ವಾಕ್ಯದಲ್ಲಿ ಬರೆಯಿರಿ:

೧. ಸ್ವಾಭಿಮಾನ : ನಾವು ಸ್ವಾಭಿಮಾನದ ಬದುಕನ್ನು ಬಾಳಬೇಕು.

೨. ಮಮತೆ : ಎಲ್ಲರಿಗೂ ಪ್ರೀತಿ ಮಮತೆಯಿಂದ ಕಾಣಬೇಕು

೩. ದೀಪ : ದೀಪವು ಮನೆಯನ್ನು ಬೆಳಗುತ್ತದೆ.

೪. ಸಾಧನೆ : ಚೆನ್ನಾಗಿ ಓದಿ ಜೀವನದಲ್ಲಿ ಒಳ್ಳೆಯ ಸಾಧನೆಯನ್ನು ಮಾಡಬೇಕು.




೧. ಈ ಕೆಳಕಂಡ ಪದಗಳಿಗೆ 'ಆಗೋಣ' ಪದವನ್ನು ಸೇರಿಸಿ, ಹೊಸ ಪದಗಳನ್ನು ಬರೆಯಿರಿ.

ಮಾದರಿ: ಮರಗಳು + ಆಗೋಣ = ಮರಗಳಾಗೋಣ

| | | |
|---|---|---|
| ಮರಗಳು | ಆಗೋಣ | ಮರಗಳಾಗೋಣ |
| ಗಿಡಗಳು | | ಗಿಡಗಳಾಗೋಣ |
| ವೈದ್ಯರು | | ವೈದ್ಯರಾಗೋಣ |
| ಪಂಡಿತರು | | ಪಂಡಿತರಾಗೋಣ |
| ಶಿಕ್ಷಕರು | | ಶಿಕ್ಷಕರಾಗೋಣ |
| ಸೈನಿಕರು | | ಸೈನಿಕರಾಗೋಣ |
| ಹೃದಯಿಗಳು | | ಹೃದಯಿಗಳಾಗೋಣ |